# ತಾನೊಂದು ಬಗೆದರೆ...

■ ಬಿ.ಎಲ್. ವೇಣು



ವಿಲಿಯಂ ಹೆಸರಿಗಷ್ಟೆ ಬಾಸ್. ಕಂಪನಿಯ ಡೆವಲಪ್‌ಮೆಂಟ್ಸ್, ಅಡ್ಮಿನಿಸ್ಟ್ರೇಷನ್ಸ್ ಎಲ್ಲಾ ನನ್ನ ಕ್ಯಾಲುಕುಲೇಶನ್ ಮೇಲೆಯೇ ನಿಂತಿದೆ. ನಾನಿಲ್ಲದಿದ್ದರೆ ಕಂಪನಿ ಹೇಗೆ ನಡೆಸುತ್ತಾರೋ ಎಂಬ ದಿಗಿಲು ಅನೇಕ ಸಲ ಇವನಲ್ಲಿ ಉಂಟಾಗಿದೆ. ಆದರೂ ವಿಲಿಯಂ ತನ್ನಿಂದಲೇ ಎಲ್ಲಾ, ತನ್ನ ಬುದ್ಧಿವಂತಿಕೆಯೇ ಕಂಪನಿಯ ಬಂಡವಾಳ ಎಂಬಂತೆ ಎಲ್ಲರೊಡನೆಯೂ ತನ್ನನ್ನು ತಾನು ಪ್ರದರ್ಶಿಸಿಕೊಳ್ಳುವ ಪರಿಗೆ ಇವನು ಬೆರಗಾಗಿದ್ದು ಇದೆ. ಸಿಡಿಮಿಡಿಗೊಂಡಿದ್ದು ಇದೆ. ಇಪ್ಪತ್ತು ವರ್ಷಗಳ ಹಿಂದೆ ಇವನೀ ಕಂಪನಿಗೆ ಕಾಲಿಟ್ಟಾಗ ಹೆಚ್ಚು ಸ್ಟಾಫ್‌ಗಳಿರಲಿಲ್ಲ. ವಿದೇಶ ವ್ಯವಹಾರಗಳ ಗುಟ್ಟು ಪಟ್ಟುಗಳನ್ನು ಆಗ ತಾನೇ ವಿಲಿಯಂ ಅಭ್ಯಸಿಸುತ್ತಿದ್ದ. ಅವನ ನಿಧಾನಗತಿಗೆ ವೇಗ ಕೊಟ್ಟವನು ಇವನು. ಇವನ ಎಂಬಿಎ, ಅದರ ಜೊತೆಗೆ ಮಾಡಿದ ಅನೇಕ ಕೋರ್ಸುಗಳಲ್ಲಿ ಉಪಯೋಗವಾಗಿ ಕಂಪನಿಯನ್ನು ಬೆಳೆಸಿತು ಹಾಗೆ ಇವನನ್ನೂ. ಈಗ ಸಾವಿರಾರು ಜನ ಸ್ಟಾಫ್‌ಗಳಿದ್ದಾರೆ. ಬಿಡುವಿಲ್ಲದ ದುಡಿಮೆ. ಕೇವಲ ಹದಿನೈದು ಸಾವಿರಕ್ಕೆ ಕಂಪನಿ ಸೇರಿದ್ದ ಇವನೀಗ ಲಕ್ಷಗಟ್ಟಲೆ ಸಂಬಳದಾರ. ಬಳಸಲು ಕಾರು. ಇರಲು ಫ್ಲ್ಯಾಟು ಕೊಟ್ಟಿದ್ದಾನೆ ವಿಲಿಯಂ. ಕಂಪನಿಯನ್ನು ಬೆಳೆಸಿದ ಇವನನ್ನು ಬಿಸಿನೆಸ್ ಪಾರ್ಟನರ್ ಮಾಡಿಕೊಳ್ಳುತ್ತೇನೆಂದು ಹಲವು ವರ್ಷಗಳಿಂದ ಮೂಗಿಗೆ ತುಪ್ಪ ಹಚ್ಚುತ್ತಲೇ ಇದ್ದಾನೆ. ಕೃತಜ್ಞತೆ ಎಂಬುದೇ ಇಲ್ಲದ ಜನ. ಇವತ್ತಿಗೂ ಇವನೊಬ್ಬ ಕಂಪನಿಗಾಗಿ ದುಡಿವ ವರ್ಕರ್ ವಿಲಿಯಂಗೆ ಬ್ರಾಡ್‌ಮೈಂಡೂ ಇಲ್ಲ. ಬಿಗ್ ಹಾರ್ಟು ಇಲ್ಲ. ಅವನೊಂದಿಗೆ ಡೇ ಅಂಡ್ ನೈಟ್ ದುಡಿವ ನಾವೆಲ್ಲಾ ಅವನ ಪಾಲಿಗೆ ಉಂಡೆಸೆವ ಬಾಳೆಲೆಯಂತಷ್ಟೆ ಎಂದವನು ತಹತಹಿಸುತ್ತಾನೆ. ಬೇರೆ ಕಂಪನಿಗೆ ಹಾರಲೆ ಎಂಬ ತುಡಿತ ಒಂದು ಕಡೆ. ನಾನು ಕಟ್ಟಿ ಬೆಳೆಸಿದ ನನ್ನದೇ ಕಂಪನಿ ಎಂಬ ಸೆಂಟಿಮೆಂಟ್ ಒಂದೆಡೆ. ತಾನೇ ನೇಯ್ದ ಬಲೆಯಲ್ಲಿ ಸಿಲುಕಿದ ಜೇಡದ ಪರಿ. ಒಟ್ಟಾರೆ ನಾನಿವನ ಪಾಲಿಗೆ ದುಡಿವ ಯಂತ್ರ ಕಸಿವಿಸಿಗೊಳ್ಳುತ್ತಾನೆ.

ಬೆಲ್ ಮಾಡದೆ ನೇರವಾಗಿ ಡೋರ್ ತಳ್ಳಿ ತನ್ನ ಚೇಂಬರ್ ಒಳಗೆ ಬರುತ್ತಿದ್ದಾನೆಂದರೆ ಅವ ತನ್ನ ಬಾಸ್ ವಿಲಿಯಂನಲ್ಲದೆ ಬೇರೆ ಯಾರಿರಲು ಸಾಧ್ಯ! ಬಾಸ್ ಅನ್ನಿಸಿಕೊಂಡವನಿಗೆ ಅಷ್ಟಾದರೂ ದಾರ್ಷ್ಟ್ಯ ಇರಬೇಡವೆ ಅಂದುಕೊಳ್ಳುತ್ತಾ ತುಟಿಯಲ್ಲಿ ನಗೆ ಜಿನಿಗಿಸುತ್ತಾನೆ. ಈ ಪೇಪರ್ಸ್ ತಗೊಳ್ಳಿ ಎಂದು ಪೇಪರ್ಸ್ ಮೇಜಿನ ಮೇಲಿಟ್ಟು ಕೂರುತ್ತಾನೆ. ಏನ್ಸಾರ್ ಇದು? ಗೊತ್ತಿದ್ದರೂ ಇವನು ಕೇಳುತ್ತಾನೆ ಎಂದಿನಂತೆ. ವೀಸಾ ಪೇಪರ‍್ಸು ಮೆಡಿಕಲ್ ಇನ್ಸೂರೆನ್ಸ್ ಫಾರಿನ್ ಎಕ್ಸ್‌ಚೇಂಜ್ ಮನಿ ಎಕ್ಸಟ್ರಾ ಎಕ್ಸಟ್ರಾ ತೋರಿಸಿ ದೊಡ್ಡದಾದ ನಿಟ್ಟುಸಿರು ಚೆಲ್ಲುತ್ತಾನೆ ಬಾಸ್. ಇವನೇನು ಎಕ್ಸೈಟ್ ಆಗುವುದಿಲ್ಲ ಥ್ಯಾಂಕ್ಸು ಹೇಳುವುದಿಲ್ಲ. ಟಿಕೆಟ್ ಯಾವಾಗ ಬರುತ್ತೆ ಬಾಸ್? ಪ್ರಶ್ನಿಸುತ್ತಾನೆ. ವಿಥ್ ಇನ್ ಎ ವೀಕ್ ಗಿರೀಶ್. ಚೇಂಬರಿನಲ್ಲಿ ಒಂದಿಷ್ಟು ಕೆಲಸವಿದೆ. ಐ ವಿಲ್ ಕಾಲ್ ಯು ಲೇಟರ್ ಓಕೆ? ಎನ್ನುತ್ತಾ ಬಾಸ್ ಸರಕ್ಕನೆ ನಿರ್ಗಮಿಸುತ್ತಾನೆ.

ನ್ಯೂ ಪ್ರಾಜೆಕ್ಟ್ ಕಾರಣವಾಗಿ ಇವನಿಗೂ ಒಂದಿಷ್ಟು ಟೆನ್ಶನ್. ತನ್ನನ್ನು ವಿದೇಶಕ್ಕೆ ಕಳುಹಿಸಿದ ಮೇಲೆ ತನ್ನ ಗೈರಿನಲ್ಲಿ ಯಾರು ಯಾರಿಗೆ ಯಾವ ವರ್ಕ್ಸ್ ನಿಗದಿ ಮಾಡಬೇಕು ಎಂಬ ಯೋಚನೆ. ಹ್ಯೂಮನ್ ರಿಸೋರ್ಸ್ ವಿಂಗ್‌ನಲ್ಲಿರುವ ಶಾಲಿನಿ ಶಾರ್ಪ್ ಆಗಿದ್ದಾಳೆ. ಕ್ಯೂಟ್ ಉಂಟು, ಕೊಬ್ಬು ಉಂಟು, ಅವಳಿಗೆ ಚಾರ್ಜ್ ವಹಿಸಬೇಕು. ಅಂಕಲ್ಲಾದರೂ ಮದುವೆಯಾಗದ ಎವರ್ ಬ್ಯಾಚುಲರ್ ಪರಮ್ ಶೆಟ್ಟಿಗೆ ಎದುರಾಳಿ ಕಂಪನಿಗಳ ಟೆಂಡರ್ಸ್ ಮೇಲೆ ಕಣ್ಣಿಡಲು ಸೂಚಿಸಬೇಕು. ಸೂಟುಕೇಸ್ ಸಿದ್ಧಪಡಿಸಿಟ್ಟುಕೊಳ್ಳಬೇಕು. ಹಲವು ವಿವರಿಸಲಾಗದ ರೆಸ್ಪಾನ್ಸಿಬಿಲಿಟಿಗಳು. ನಾನು ಫಾರಿನ್ ಟೂರ್ ಹೋಗಿ ಎಂಜಾಯ್ ಮಾಡ್ತೀನಿ ಅಂತ ಹೆಂಡತಿ ಭಾಗ್ಯ ತಿಳಿದುಕೊಂಡಿದ್ದಾಳೆ. ಅವಳಿಗೇನು ಗೊತ್ತು ಇಲ್ಲಿ ಪ್ರಾಜೆಕ್ಟ್ ಪ್ರಾಡೆಕ್ಟ್‌ಗಳನ್ನು ಕನ್ವಿನ್ಸ್ ಮಾಡಲು ತಾನು ಪಡುವ ಕಷ್ಟ? ಅಲ್ಲಿನ ಬಿಸಿನೆಸ್ ಡಿಬೇಟ್ಸ್ ಮ್ಯಾನೇಜ್‌ಮೆಂಟ್ ಟೆಕ್ನಿಕ್ ಅರಿಯಲು ಎಷ್ಟು ಕೇರ್ ತಗೋಬೇಕಾಗ್ತದೆ ಅಂತ. ಒಳಗೆ ಕುದಿಯುತ್ತಾನೆ. ಲ್ಯಾಪ್‌ಟಾಪ್